**ದಿನಾಂಕಃ 26-05-2022 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.**

ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ ಅದರಲ್ಲಿ ಬರೆದಿರುವ ವಿಷಯಗಳು ನಾನೇ ಹೇಳಿ ಬರೆಸಿದ್ದೇನೆ. ಸದರಿ ಸಂಗತಿಗಳು ಸತ್ಯದಿಂದ ಕೂಡಿರುತ್ತವೆ.

**ಮುಂದೂವರೆದ ಮುಖ್ಯ ವಿಚಾರಣೆ 5 ನೇ ಪ್ರತಿವಾದಿಗಳ ಪರ ಶ್ರೀ ಎ.ಎಸ್.ಕೆ ವಕೀಲರಿಂದಃ**

ಸಾಕ್ಷಿಗೆ ನಿ ಡಿ -26 ಕ್ರಯ ಪತ್ರವನ್ನು ತೋರಿಸಲಾಯಿತು. ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನನ್ನ ಸಹಿ ಎಂದು ಗುರುತಿಸಿದ್ದಾರೆ ಸದರಿ ಸಹಿಯನ್ನು ಈಗಾಗಲೇ ನಿ ಡಿ -26 ಸಿ ಎಂದು ಗುರುತಿಸಲಾಗಿದೆ.

ಸಾಕ್ಷಿಗೆ ನಿ ಡಿ -27 ದಾಖಲೆಯನ್ನು ತೋರಿಸಲಾಯಿತು. ಅದರಲ್ಲಿರುವ ನಿ ಡಿ -27 ಸಿ ಸಾಕ್ಷಿಯ ಸಹಿಯನ್ನು ಸಾಕ್ಷಿಯು ನನ್ನ ಸಹಿ ಎಂದು ಗುರುತಿಸಿರುತ್ತಾರೆ.

ಅದೇ ರೀತಿ ಸಾಕ್ಷಿದಾರರಾದ ಮಹಮ್ಮದ್ ಗೌಸ್, ಕರೀಮಸಾಬ ಲಕ್ನೋರವರ ಹಾಗೂ ಉಮಿಕುಬ್ರಾರವರ ಸಹಿಗಳನ್ನು ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಈಗಾಗಲೇ ನಿ ಡಿ -27 ಬಿ ಮತ್ತು ಡಿ ಎಂದು ಗುರುತಿಸಲಾಗಿದೆ.

ಸದರಿ ದಾಖಲೆಯಲ್ಲಿರುವ ಕಲೀಮ ಸಾಬ್ ಇವರ ಸಹಿಯನ್ನು ಗುರುತಿಸಿದ್ದು ಸದರಿ ಸಹಿಯನ್ನು ಈಗಾಗಲೇ ನಿ ಡಿ -27 ಎ ಎಂದು ಗುರುತಿಸಲಾಗಿದೆ.

ಸದರಿ ದಾಖಲೆಯಲ್ಲಿರುವ ಸಿದ್ದಲಿಂಗಪ್ಪ ಇವರ ಸಹಿಯನ್ನು ಗುರುತಿಸಿದ್ದು ಸದರಿ ಸಹಿಯನ್ನು ಈಗ ನಿ ಡಿ -27 ಎಫ್ ಎಂದು ಗುರುತಿಸಲಾಯಿತು.

ನಾನು ನಿ ಪಿ -26 ಕ್ಕೂ ಸಹ ಸಹಿ ಮಾಡಿರುತ್ತೇನೆ ಸದರಿ ದಾಖಲೆಯಲ್ಲಿರುವ ಸಹಿಯನ್ನು ಸಾಕ್ಷಿಯು ತನ್ನದೆಂದು ಗುರುತಿಸಿರುತ್ತಾರೆ. ಸದರಿ ಸಹಿಯನ್ನು ಈಗಾಗಲೇ ನಿ ಡಿ -26 ಸಿ ಎಂದು ಗುರುತಿಸಲಾಗಿದೆ ಹಾಗೂ ಸಾಕ್ಷಿದಾರರಾದ ಚೆನ್ನಪ್ಪ ಕೆ ಇವರ ಸಹಿ ಹಾಗೂ ಒಂದನೇ ಪಾರ್ಟಿ ಸಬಿಯಾ ಹಾಗೂ ಎರಡನೇ ಪಾರ್ಟಿ ಸಿದ್ದಲಿಂಗಪ್ಪ ಇವರ ಸಹಿಗಳನ್ನು ಗುರುತಿಸಿರುತ್ತಾರೆ. ಸದರಿ ಸಹಿಗಳನ್ನು ಈಗಾಗಲೇ ನಿ ಡಿ -26 ಎ ಮತ್ತು ಬಿ ಎಂದು ಗುರುತಿಸಲಾಗಿದೆ.

**<u>ಪಾಟೀ ಸವಾಲುಃ ವಾದಿಗಳ ಪರ ಶ್ರೀ ವೈ.ಹೆಚ್.ಕೆ ವಕೀಲರ ಕೋರಿಕೆಯ ಮೇರೆಗೆ</u>**

**<u>ಮುಂದೂಡಲಾಯಿತು .</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

Sd/-
(ಬಿ.ಸಿದ್ದರಾಜು)
1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ರಾಣೇಬೆನ್ನೂರು.